ಇಂಜಿನೀಯರ್ ಹೋಗಲಿಲ್ಲವೆಂದು ಹೇಳಿದರೆ ಅವರು ಕರ್ತವ್ಯ ಭ್ರಷ್ಟರಾಗಿದ್ದಾರೆ. ಅಂತಹ ಇಂಜಿನೀಯರ್ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದಕ್ಕೆ ನಾನು ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

(ಊ) ಐ.ಟಿ.ಐ. ವಿದ್ಯಾರ್ಥಿಗಳ ಸ್ಟಾಫ್ ಮತ್ತು ನಾನ್ ಟೀಚಿಂಗ್ ಸ್ಟಾಫ್ ಕುರಿತು.

ಶ್ರೀ ಜಿ. ಎ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಉಪಾಧ್ಯಕ್ಷರೇ, ಕಳೆದ ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಐಟಿಐ ವಿದ್ಯಾರ್ಥಿಗಳು ಮತ್ತು ಅದರಲ್ಲಿ ಪಾಠ ಮಾಡತಕ್ಕಂಥ ಸ್ಟಾಫ್ ಮತ್ತು ನಾನ್ ಟೀಚಿಂಗ್ ಸ್ಟಾಫ್‌ರವರೆಲ್ಲರೂ ಕೂಡ ಅಮರಣಾನಂತರ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ನಾವು ಆ ಪ್ರಶ್ನೆಯನ್ನು ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಎರಡೂ ಕಡೆ ಕೂಡ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಸರ್ಕಾರವು 'ಅವರನ್ನೆಲ್ಲ ಖಾಯಂ ಮಾಡುತ್ತೇವೆ' ಎನ್ನುವಂಥ ಒಂದು ಆಶ್ವಾಸನೆಯನ್ನು ಕೊಟ್ಟಿತ್ತು. ಆದರೆ ಸರ್ಕಾರ ಈಗ ಐಟಿಐನಲ್ಲಿ 12 ಸಾವಿರ ಜನ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ಆದರೆ 12 ಸಾವಿರ ಜನ ಅದರಲ್ಲಿ ಇಲ್ಲ. ಅಲ್ಲಿ ಎಷ್ಟು ಜನ ಇದ್ದಾರೆ ಎನ್ನುವುದಕ್ಕೆ ಅವರು ತಮ್ಮ ಸಂಘದ ಮುಖಾಂತರ ಒಂದು ಲಿಸ್ಟನ್ನೇ ಕೊಟ್ಟಿದ್ದಾರೆ. ಅದಷ್ಟಲ್ಲಿ ಸರ್ಕಾರ ಹೇಳಿರುವಷ್ಟು ಜನ ಕೆಲಸ ಮಾಡುತ್ತಿಲ್ಲ. ಆದರೆ 1500 ಜನ ಮಾತ್ರ ಇದ್ದಾರೆ. ಅವರು ಕೊಟ್ಟ ಪಟ್ಟಿಯಲ್ಲಿ ಈ ರೀತಿ ಇದೆ. ಸರ್ಕಾರದಿಂದ ನೇರವಾಗಿ ನಡೆಸುತ್ತಿರತಕ್ಕಂಥದ್ದರಲ್ಲಿ 310 ಜನ ಬಿ.ಇ. ಮಾಡಿರತಕ್ಕಂಥವರು, 258 ಜನ ಡಿಪ್ಲೊಮಾ ಮಾಡಿರತಕ್ಕಂಥವರು, ವರ್ಕರ್ ಟೀಚರ್ಸ್ 508 ಜನ, ಕ್ಲರ್ಕ್ಸ್ 24, ಪಿಯೋನ್ಸ್ 20 ಜನ 5 ವರ್ಷಕ್ಕೂ ಮೇಲ್ಪಟ್ಟು ಕೆಲಸ ಮಾಡಿರತಕ್ಕಂಥವರು 409 ಜನ, 2 ವರ್ಷ ಕೆಲಸ ಮಾಡಿರತಕ್ಕಂಥವರು 525 ಜನ, 2 ವರ್ಷಕ್ಕಿಂತ ಕೆಳಗಡೆ ಇರತಕ್ಕಂಥವರು 186 ಜನ.

ಉಪಾಧ್ಯಕ್ಷರು :- ನೀವು ಕೇವಲ ಪ್ರಸ್ತಾಪ ಮಾಡಬೇಕಷ್ಟೆ. ನೀವು ಓದುತ್ತಾ ಇದ್ದರೆ ಹೇಗೆ?

ಶ್ರೀ ಜಿ. ಎ. ಶ್ರೀ ರಾಮರೆಡ್ಡಿ :- ಆದ್ದರಿಂದ ಸಂಖ್ಯೆ ಜಾಸ್ತಿಯಾಗಿದೆಯೆಂದು ಸರ್ಕಾರ ಒಪ್ಪಿಕೊಂಡಿದ್ದರೂ ಕೂಡ ಇದುವರೆಗೂ ಖಾಯಂ ಮಾಡುವುದಕ್ಕೆ ಆದೇಶ ಕೊಟ್ಟಿಲ್ಲ. ಅವರು ಬಹಳ ತೊಂದರೆಯಲ್ಲಿದ್ದಾರೆ. ಆದ್ದರಿಂದ ತಕ್ಷಣ ಸರ್ಕಾರ ಏನು ಆಶ್ವಾಸನೆ ಕೊಟ್ಟಿದೆ ಅದನ್ನು ಈಡೇರಿಸಬೇಕು ಅವರನ್ನು ಖಾಯಂ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :– ಮಾನ್ಯ ಉಪಾಧ್ಯಕ್ಷರೇ, ಬಹಳ ಬಡತನ ರೇಖೆಯಲ್ಲಿ ಇರತಕ್ಕಂಥವರು ಐಟಿಐ ಶಿಕ್ಷಣ ಸಂಸ್ಥೆಗಳು ಇವೆ. ಅದರ ಬಗ್ಗೆ ಕಾಂಗ್ರೆಸ್ ಸರ್ಕಾರ, ಈಗಿರತಕ್ಕಂಥ ಜನತಾದಳ ಸರ್ಕಾರಗಳು ಆಶ್ವಾಸನೆಗಳ ಒಂದು ದೊಡ್ಡ ಪಟ್ಟಿಯೇ ಈ ಫೈಲಿನಲ್ಲಿದೆ. ಸುಮಾರು 200-300 ಪುಟಗಳು ಆಗಬಹುದು. ಒಂದು ದೊಡ್ಡ ಪುಸ್ತಕ ಬರೆಯಬಹುದು. ಆದರೆ ಆ ಐಟಿಐಯಲ್ಲಿ ಕೆಲಸ ಮಾಡತಕ್ಕಂಥವರ ಗೋಳು ಮಾತ್ರ ತಪ್ಪಿಲ್ಲ. ಈಗಾಗಲೇ ವಿದ್ಯಾರ್ಥಿಗಳು ಚಳುವಳಿ ಮಾಡಿದ್ದಾರೆ, ಇದನ್ನು ಏನಾದರೂ ಮಾಡಿ ಸರ್ಕಾರ ಅನುದಾನ ಕೊಡುವುದರ ಮೂಲಕ ನಮಗೆ ಸಹಾಯ ಮಾಡಬೇಕೆಂದು ರಕ್ತದಲ್ಲಿ ಲಿಖಿತ ಮೂಲಕ ಬಹಳ ಬೇಡಿಕೊಂಡಿದ್ದಾರೆ. ಆದರೆ ಸರ್ಕಾರ ಇವರ ಬಗ್ಗೆ ಗಮನಕೊಡುತ್ತಾ ಇಲ್ಲ. ಏಕೆಂದರೆ ಇವತ್ತು ಉದ್ಯೋಗವೇ ಇಲ್ಲದಿರತಕ್ಕಂಥ ಒಂದು ಸಮಯದಲ್ಲಿ ಈ ಐಟಿಐ ಯನ್ನು ಕಲಿಯುವುದರಿಂದ ಉದ್ಯೋಗ ಸಿಗತಕ್ಕಂಥದ್ದಕ್ಕೆ ಅಥವಾ ತಾನೆ ಸ್ವಉದ್ಯೋಗ ಮಾಡು ಕೊಳ್ಳುವಂಥದ್ದಕ್ಕೆ ಸರ್ಕಾರ ಬಹಳ ಜವಾಬ್ದಾರಿಯುತವಾಗಿ ಗಂಭೀರವಾಗಿ ಉತ್ತರ ಕೊಡಬೇಕು. ತಿಂಗಳಿಗೆ ಇಷ್ಟು ಅಂತ ತತ್‌ಕ್ಷಣದಿಂದ ಫೆಬ್ರವರಿ ತಿಂಗಳಿನಲ್ಲಿ ಸರ್ಕಾರ ಘೋಷಣೆ ಮಾಡಿ, ನಂತರ ಅವರ ಫೈನಾನ್ಸ್ ಕಮಿಟ್‌ಮೆಂಟ್ಸ್ ನೋಡಿಕೊಂಡು ಅವರು ಅನುದಾನ ಕೊಡತಕ್ಕಂಥ ವ್ಯವಸ್ಥೆ ಮಾಡಲಿ. ಈ ಫೆಬ್ರವರಿ ಒಳಗೆ ಈ ಸದನ ಮುಗಿಯುವುದರೊಳಗೆ ಘೋಷಣೆ ಮಾಡಬೇಕು. ಏಕೆಂದರೆ ಮಾನ್ಯ ಉಪ ಮುಖ್ಯಮಂತ್ರಿಗಳೇ ಕಾರ್ಮಿಕ ಮಂತ್ರಿಗಳಾಗಿರುವುದರಿಂದ ಸಮಸ್ಯೆಯ ಅರಿವು ಅವರಿಗೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಸದನದಲ್ಲಿ ಈಗಲೇ ಘೋಷಣೆ ಮಾಡುವುದರ ಬಗ್ಗೆ ಒಂದು ಆಲೋಚನೆ ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) :– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ವಿಧಾನ ಸಭೆ ಮತ್ತು ವಿಧಾನ ಪರಿಷತ್ ಎರಡು ಸದನಗಳಲ್ಲಿ ಹಾಗೂ ಹೊರಗಡೆ ಇದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದುದರಿಂದ ಆದಷ್ಟು ಶೀಘ್ರದಲ್ಲಿ ಅವರ ಬೇಡಿಕೆಯನ್ನು ಮಾನ್ಯ ಮಾಡುತ್ತಾರೆಂದು ನಾನು ಬಹಳಷ್ಟು ಭರವಸೆಯನ್ನು ಇಟ್ಟುಕೊಂಡಿದ್ದೇವೆ. ಕಾರಣ ಏನೆಂದರೆ ಸರ್ಕಾರದವರು ಮತ್ತು ನಾವುಗಳೆಲ್ಲರೂ ಏನು ಹೇಳುತ್ತೇವೆಂದರೆ ಬಹಳಷ್ಟು ನಿರುದ್ಯೋಗಿಗಳು ಇರುವುದರಿಂದ ಅವರಿಗೆ ಏನಾದರೂ ಒಂದು ಉದ್ಯೋಗವನ್ನು ಓದಗಿಸಬೇಕೆಂದು. ಬಹಳ ಬಡತನದಲ್ಲಿ ಐ.ಟಿ.ಐ. ಕಾಲೇಜಿನಲ್ಲಿ ಕಲಿತು ಹೊರಗಡೆ ಬಂದಿರತಕ್ಕಂತಹ ವಿದ್ಯಾರ್ಥಿಗಳು ಅವರು ತಮ್ಮ ಕಾಲಿನ ಮೇಲೆ ತಾವು ನಿಲ್ಲುವಂತಹ ಸಾಮರ್ಥ್ಯ ಪಡೆದುಕೊಳ್ಳುವುದಕ್ಕೆ ಅವಕಾಶವಿದೆ. ಸುಮಾರು 10-15 ವರ್ಷಗಳಿಂದಲೂ ವಿವಿಧ ರೀತಿಯಲ್ಲಿ, ನಾನಾ ರೀತಿಯಲ್ಲಿ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುತ್ತಿದ್ದಾರೆ. ಆದುದರಿಂದ ಮಾನವಿಯತೆಯ ದೃಷ್ಟಿಯಿಂದ ಅವರ ಬಹಳ ದಿವಸಗಳಿಂದ ಇರತಕ್ಕಂತಹ ಬೇಡಿಕೆಗಳನ್ನು ಈಡೇರಿಸುವುದಕ್ಕೆ ನಿರ್ದಿಷ್ಟವಾಗಿ ಒಂದು ಉತ್ತರವನ್ನು ಹೇಳಿದರೆ ಬಹುಶಃ ಜನರು ಅದನ್ನು ಮೆಚ್ಚಿಕೊಳ್ಳುತ್ತಾರೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) :- ಸನ್ಮಾನ್ಯ ಉಪಾಧ್ಯಕ್ಷರೇ, ಖಾಸಗಿ ಐ.ಟಿ.ಐ. ಸಂಸ್ಥೆಗಳಿಗೆ ಅನುದಾನಕ್ಕೆ ಒಳಪಡಿಸಬೇಕೆಂದು ಬಹಳಷ್ಟು ದಿಮಸಗಳಿಂದ ಚರ್ಚೆ ನಡೆಯುತ್ತಿದೆ. ಹಿಂದೆ ಕಾಂಗ್ರೆಸ್ ಪಕ್ಷವು ಆಡಳಿತವನ್ನು ನಡೆಸುತ್ತಿದ್ದಂಥ ಸಂದರ್ಭದಲ್ಲಿ ಹಳ್ಳಿಗಾಡಿನಲ್ಲಿರತಕ್ಕಂತಹ ಖಾಸಗಿ ಐ.ಟಿ.ಐಗಳನ್ನು ಅನುದಾನಕ್ಕೆ ಒಳಪಡಿಸಬೇಕೆಂದು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದರು. ಆದಕ್ಕೆ ನಿಬಂಧನೆಗಳನ್ನು ಏನು ಮಾಡಿದ್ದರು ಎಂದರೆ, ಆ ರೀತಿಯಾದಂತಹ ಐ.ಟಿ.ಐ. ಸಂಸ್ಥೆಗಳು ಪ್ರಾರಂಭ ವಾಗಿ 7 ವರ್ಷಗಳು ಕಳೆದಿರಬೇಕು. ಮತ್ತು ಆ ಪ್ರದೇಶದಲ್ಲಿ 50 ಸಾವಿರಗಿಂತಲೂ ಕಡಿಮೆ ಜನಸಂಖ್ಯೆಯನ್ನು ಹೊಂದಿರಬೇಕು. ಗ್ರಾಮಾಂತರದಲ್ಲಿರತಕ್ಕಂತಹ ಐ.ಟಿ.ಐ.ಗಳಿಗೆ ಮಾತ್ರ ಅನುದಾನವನ್ನು ಕೊಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡ ಮೇಲೆ ಪಟ್ಟಣಗಳಲ್ಲಿರತಕ್ಕಂಥ ಬೇರೆ ಐ.ಟಿ.ಐ. ಸಂಸ್ಥೆಗಳವರೂ ಸಹ ಅನುದಾನವನ್ನು ನಮಗೂ ಸಹ ಕೊಡಬೇಕೆಂದು ಅಲ್ಲಿಯ ವಿದ್ಯಾರ್ಥಿಗಳು ಮತ್ತು ಅಲ್ಲಿ ಕೆಲಸವನ್ನು ಮಾಡತಕ್ಕಂತಹ ಸಿಬ್ಬಂದಿ ವರ್ಗದವರು, ಎಲ್ಲರೂ ಕೂಡ ಗಲಾಟೆ ಮಾಡುವುದಕ್ಕೆ ಪ್ರಾರಂಭಮಾಡಿದರು. ಈ ರೀತಿಯಾಗಿ ನಡೆದ ಮೇಲೆ ಹಿಂದೆ ಇದ್ದಂತಹ ಸರ್ಕಾರಗಳು ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಎಲ್ಲಾ ರೀತಿಯ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಒಂದು ಹೇಳಿಕೆಯನ್ನು ವಿಧಾನ ಪರಿಷತ್ತಿನಲ್ಲಿ ಕೊಟ್ಟಿದ್ದೇನೆ. ಈ ಸರ್ಕಾರ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಖಾಸಗಿ ಐ.ಟಿ.ಐ. ಸಂಸ್ಥೆಗಳಿಗೂ ಅನುದಾನವನ್ನು ಕೊಡಬೇಕೆಂದು ಪರಿಶೀಲನೆಯನ್ನು ಮಾಡುತ್ತಿದೆ.

(ಈ ಹಂತದಲ್ಲಿ ಫ್ಯಾನಲ್ ಛೇರ್ಮನ್‌ರಾದ ಶ್ರೀ ಚಂದ್ರಕಾಂತ ಬೆಲ್ಲದ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರೂಲರ್ ಏರಿಯಾದ ಜೊತೆಗೆ ಪಟ್ಟಣ ಪ್ರದೇಶದಲ್ಲಿರತಕ್ಕಂತಹ ಐ.ಟಿ.ಐ. ಸಂಸ್ಥೆಗಳನ್ನು ಸೇರಿಸುವುದಕ್ಕೆ ನಿಯಮಾವಳಿಗಳನ್ನು ಮಾಡಬೇಕೆಂಬುದ್ದರ ಬಗ್ಗೆ ಸರ್ಕಾರದಲ್ಲಿ ತೀವ್ರವಾದಂತಹ ಪರಿಶೀಲನೆಯಲ್ಲಿದೆ. ಈಗ ಅನುದಾನವನ್ನು ಕೊಟ್ಟರೆ ಸುಮಾರು 125 ಖಾಸಗಿ ಐ.ಟಿ.ಐ. ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸಬೇಕಾಗುತ್ತದೆ. 4 ರಿಂದ 5 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಅನುದಾನವನ್ನು ಕೊಡುವುದರಿಂದ ಹೊರೆಯು ಹೆಚ್ಚಾಗುತ್ತೆದೆ. ಅದಕ್ಕೋಸ್ಕರವಾಗಿ ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿ ಸುತ್ತದೆ ಆದಷ್ಟು ಜಾಗ್ರತೆ ಈ ಬಗ್ಗೆ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ಉಪಾಧ್ಯಕ್ಷರೇ, 4-5 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗುತ್ತದೆಂದು ಹೇಳಬೇಡಿ. ನಿಜವಾಗಿ ಇರತಕ್ಕಂತಹ ಐ.ಟಿ.ಐ. ಸಂಸ್ಥೆಗಳನ್ನು ಪರಿಗಣನೆಗೆ ತೆಗೆದುಕೊಂಡರೆ 4-5 ಕೋಟಿ ರೂಪಾಯಿ ಗಳಿಗಿಂತಲೂ ಸಹ ಕಡಿಮೆ ಬರುತ್ತದೆ. ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂದು

ಹೇಳುತ್ತೇನೆ. ಮತ್ತೆ ಆದಷ್ಟು ಬೇಗ ಎಂದು ತಾವು ಏನು ಹೇಳಿದಿರಿ, ಈ ಶಬ್ದಕ್ಕೆ ಸಮಯವಿಲ್ಲ, ನಿಮಿಷವಿಲ್ಲ, ಗಂಟೆ ಇಲ್ಲ ನಾನು ವಿಧಾನ ಪರಿಷತ್ತಿನಲ್ಲಿ ಸದಸ್ಯ ನಾಗಿದಾಗಲೂ ಸಹ ಇದರ ಬಗ್ಗೆ ಸರ್ಕಾರಕ್ಕೆ ಪ್ರಶ್ನೆಯನ್ನು ಕೇಳಿದ್ದೆ. 8-10 ವರ್ಷ ಗಳಿಂದಲೂ ಇದರ ಮೇಲೆ ಪ್ರಶ್ನೆಗಳು ಬರುತ್ತಲೇ ಇದೆ. ಆದುದರಿಂದ ಈ ರೀತಿಯಾ ದಂತಹ ಕೆಲಸ ನಿಮ್ಮ ಕಾಲದಲ್ಲಿ ಆಗಬೇಕು. ತಾವು ಆರ್ಥಿಕ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಇದನ್ನು ಬಗೆಹರಿಸಿ ಇಲ್ಲ ಎಂದರೆ ಒಂದು ತೀರ್ಮಾನಕ್ಕೆ ಬನ್ನಿ, ಎಲ್ಲರನ್ನು ಕರೆಸಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಏನಾದರೂ ಹೇಳಿ. ಅವರುಗಳು ಬರುವುದು ಉಪವಾಸ ಸತ್ಯಾಗ್ರಹವನ್ನು ಮಾಡುವುದು, ರಕ್ತದಲ್ಲಿ ಬರೆಯುವುದು ಇವು ಗಳನ್ನೆಲ್ಲ ನಿಲ್ಲಿಸುವುದಕ್ಕೆ ಇದನ್ನು ಮಾಡುವುದಕ್ಕೆ ಆಗುವುದಿಲ್ಲ, ನೀವು ಹೋರಾಟ ಮಾಡಬೇಡಿ, ಇಲ್ಲಿದ್ದಿದ್ದರೆ ನೀವುಗಳು ಹೋರಾಟವನ್ನು ಮಾಡಿಕೊಂಡೇ ಇರಿ ನಾವು ಆದಷ್ಟು ಬೇಗ ನೋಡುತ್ತೇವೆ ಎಂಬ ಮಾತನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೇ, ಅಮು 15 ಸಾವಿರ ಜನರು ಇದ್ದಾರೆಂದು ಹೇಳಿದರು, ಆದರೆ ಒಟ್ಟು 12 ಸಾವಿರ ಜನರು ಇದ್ದಾರೆ, ಆದರ ಬಗ್ಗೆ ಡಿಸ್ಟ್ರಿಕ್ಟ್ ಲಿಸ್ಟ್ ಇದೆ ಅದನ್ನು ಸ್ವಲ್ಪ ಹೇಳುತ್ತೇನೆ, ಆದರೆ ಪೂರ್ಣವಾಗಿ ಓದುವುದಿಲ್ಲ. ಒಟ್ಟು ಪೋಸ್ಟ್ ಗ್ರಾಜ್ಯುಟ್ ಮತ್ತು ಲೆಕ್ಚರರ್ಸ್ ಬಿ.ಇ.ಯಮು 613 ಜನರು ಇದ್ದಾರೆ. ಟೋಟಲ್ ನಂಬರ್ ಆಪ್ ಡಿಪ್ಲೋಮಾ ಲೆಕ್ಚರರ್ಸ್ 585 ಜನರಿದ್ದಾರೆ. ವರ್ಕರ್ ಕಮ್ : ಟೀಚರ್ಸ್ 1042 ಜನರಿದ್ದಾರೆ. ಒಟ್ಟು 2,440 ಜನರು ಅಷ್ಟೇ ಇರುವುದು. ಆದರಲ್ಲಿಯೂ ಒಟ್ಟು ಈ ರಾಜ್ಯದಲ್ಲಿರತಕ್ಕಂತ ವರುಗಳೆಲ್ಲರೂ ಸೇರಿ ಇಷ್ಟೇ ಇರುವುದು. ಆದುದರಿಂದ ಸರ್ಕಾರದ ಅಭಿಪ್ರಾಯದಲ್ಲಿ ಏನು 12 ಸಾವಿರ ಎಂದು ಇದೆ ಅಷ್ಟು ಇಲ್ಲ. ಆದರಲ್ಲಿಯೂ ಸಹ ಗೌರ್ನಮೆಂಟ್ ಮತ್ತು ಅನುದಾನವನ್ನು ಕೊಟ್ಟಿರುವಂಥಾದ್ದು, ಅನುದಾನವನ್ನು ಕೊಡದೇ ಇರತಕ್ಕಂತಹ ಸಂಸ್ಥೆಗಳಲ್ಲಿ ಮೂರರಲ್ಲಿಯೂ ಸಹ ಸೇರಿ ಇಷ್ಟೇ ಜನರು ಇರುವುದು. ಆದುದರಿಂದ ದಯವಿಟ್ಟು ಆಗಸ್ಟ್ ಒಳಗೆ ಇದರ ಬಗ್ಗೆ ತೀರ್ಮಾನವಾಗದೇ ಇದ್ದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿ ಆಗಸ್ಟ್ ಒಳಗೆ ಅವರನ್ನು ಖಾಯಂ ಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಕೆ. ಎಸ್. ಪುಟ್ಟಣಯ್ಯ (ಪಾಂಡುಪುರ) :- ಮಾನ್ಯ ಉಪಾಧ್ಯಕ್ಷರೇ, ಮೂಲಭೂತವಾಗಿ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳುವುದೇನೆಂದರೆ, ಒಬ್ಬ ಡಾಕ್ಟರ್‌ನ್ನು ಓದಿಸಬೇಕಾದರೆ ಸರ್ಕಾರಕ್ಕೆ 6 ಲಕ್ಷ ರೂಪಾಯಿಗಳು ಖರ್ಚಾಗುವುದು ಮತ್ತು ಒಬ್ಬ ಇಂಜಿನಿಯರ್‌ನ್ನು ಓದಿಸಬೇಕಾದರೆ ಸರ್ಕಾರಕ್ಕೆ 3 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಆದರೆ ಅವರಿಗೆ ಉದ್ಯೋಗವನ್ನು ಕೊಡುವುದರಲ್ಲಿ ಸರ್ಕಾರವೇ ಅತ್ಯಂತ ಜವಾಬ್ದಾರಿ ಯಾಗಿ ಕೆಲಸವನ್ನು ಸಹ ಮಾಡುತ್ತದೆ. ಐ.ಟಿ.ಐ.ಯನ್ನು ಓದತಕ್ಕಂತಹ ಬಡತನದ

ಮಕ್ಕಳು ಒಂದೊಂದು ಕಾರ್ಖಾನೆಯಲ್ಲಿ ಕೆಲಸವನ್ನು ಮಾಡುತ್ತಾರೆ. ಆದುದರಿಂದ ಅತ್ಯಂತ ತ್ವರಿತವಾಗಿ ಆ ಶಿಕ್ಷಣ ಸಂಸ್ಥೆಗೆ ಹೆಚ್ಚು ಸಹಾಯಕವಾದಂತಹ ಕೆಲಸವನ್ನು ಸರ್ಕಾರ ದವರು ಮಾಡಬೇಕು. ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣಕ್ಕೆ ಹೆಚ್ಚು ಸೌಲಭ್ಯ ಗಳನ್ನು ಕೊಡುತ್ತೇವೆ. ಬಹಳ ಬಡತನದಲ್ಲಿ ಓದುವಂತಹ ವಿದ್ಯಾರ್ಥಿಗಳಿಗೆ ಅನು ಕೂಲವಾಗುವಂತಹ ಐ.ಟಿ.ಐ. ಸಂಸ್ಥೆಗಳಿಗೆ ಅನುದಾನವನ್ನು ಕೊಡುವುದಕ್ಕೆ ಇಷ್ಟೊಂದು ವಿಳಂಬವನ್ನು ಮಾಡುತ್ತಿದ್ದೀರಿ. ಆದುದರಿಂದ ದಯವಿಟ್ಟು ಈ ವಿಷಯದಲ್ಲಿ ನಿರರ್ಗಳ ವಾಗಿ ಚರ್ಚೆಯಾಗಿದೆ. ಆದುದರಿಂದ ಸರ್ಕಾರ ಇದರ ಬಗ್ಗೆ ಒಂದು ಕಾಲವನ್ನು ನಿಗಧಿ ಮಾಡಬೇಕು. ಆದುದರಿಂದ ತಮ್ಮ ಮೂಲಕ ಸರ್ಕಾರ ಒಂದು ಕಾಲವನ್ನು ನಿಗಧಿ ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಶ್ವೇಶ್ವರ ಹೆಗ್ಗಡೆ ಕಾಗೇರಿ :- ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ಆಗಸ್ಟ್ ಒಳಗಡೆ ನಿಶ್ಚಯ ಮಾಡಬೇಕಾಗುತ್ತದೆ. ಆಗಸ್ಟ್ ಸೆಪ್ಟೆಂಬರ್‌ನಲ್ಲಿ ಹೊಸ ವರ್ಷ ಪ್ರಾರಂಭವಾಗುತ್ತದೆ. ಆದುದರಿಂದ ಹೊಸ ವರ್ಷ ಪ್ರಾರಂಭವಾಗುವುದರಿಂದ ಆಗಸ್ಟ್ ಒಳಗಡೆ ಗೌರ್ಮೆಂಟ್ ಆರ್ಡರ್ ಹೊರಡಿಸುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ.

(ಈ ಹಂತದಲ್ಲಿ ಶ್ರೀ ಕೆ. ಎಸ್. ಪುಟ್ಟಣಯ್ಯನವರು ಸದನದ ಭಾವಿಯಲ್ಲಿ ಬಂದು ಧರಣಿಯನ್ನು ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೇ, ಈಗ ಈ ಸದನದಲ್ಲಿ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳಿದ್ದಾರೆ. ಈಗ ಮಾನ್ಯ ಸದಸ್ಯರು ಐ.ಟಿ.ಐ. ಪ್ರಶ್ನೆಯನ್ನು ಸದನದಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಅದನ್ನು ಮಾನ್ಯ ಉಪಮುಖ್ಯಮಂತ್ರಿಗಳು ನೋಡಿ ಪರಿಶೀಲಿಸಿ ಒಂದು ತೀರ್ಮಾನವನ್ನು ತೆಗೆದು ಕೊಳ್ಳುತ್ತೇನೆಂದು ಹೇಳಿದ್ದಾರೆ. ಆದರೆ ಈ ಪ್ರಶ್ನೆ ಏನಿದೆ ಇದು ಒಂದೇ ಸಂಸ್ಥೆಯದು ಅಲ್ಲ. ನನಗೆ ಗೊತ್ತಿರುವ ಹಾಗೆ ಅನುದಾನ ರಹಿತವಾದಂತಹ ಸಂಸ್ಥೆಗಳು ಎಷ್ಟು ಇವೆ ಶಿಕ್ಷಣ ಇಲಾಖೆಯಲ್ಲಿ ಶಾಶ್ವತವಾಗಿ ಅನುದಾನ ರಹಿತ ಶಾಲೆಗಳು ಎಂದು ತೆರೆಯಲು ಅವಕಾಶವನ್ನು ಕೊಟ್ಟಿದ್ದಾರೆ. ಇದರಲ್ಲಿ ಸಾಕಷ್ಟು ಪ್ರಾಥಮಿಕ ಶಾಲೆಗಳು, ಮಾಧ್ಯಮಿಕ ಶಾಲೆಗಳು, ಕಾಲೇಜುಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಾಗಿ ಈ ಸಂಸ್ಥೆಗಳೂ ಸಹ ಇವೆ. ಈಗ ಏನಾಗುತ್ತಿದೆ ಎಂದರೆ, ತಾವು ಯಾವಾಗಲೂ ತೀರ್ಮಾನ ತೆಗೆದು ಕೊಳ್ಳುವಾಗ ಅಲ್ಲಿಯ ರೋಸ್ಟರ್ ಸಿಸ್ಟಂ ಮತ್ತು ಅಲ್ಲಿಯ ಅಪಾಯಿಂಟ್‌ಮೆಂಟ್, ಅಲ್ಲಿಯ ಗ್ರಾಂಟ್ಸ್ ಇವುಗಳೆಲ್ಲವನ್ನೂ ನೋಡುವಂತಹ ಅವಶ್ಯಕತೆ ಇದೆ ಎನ್ನತಕ್ಕಂತಹ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ ಇದರ ಹಿಂದೆ 50-60 ಸಾವಿರ ಅಪಾಯಿಂಟ್ ಗಳನ್ನು ಸುಪ್ರೀಂ ಕೋರ್ಟ್ ಆದೇಶವಿದೆ ಎಂದು ಹೇಳಿ ರೆಗ್ಯೂಲರೈಜ್ ಮಾಡಿ. ನೀವು ನಾವು ಎಲ್ಲರೂ ಸಹ ಸೇರಿ ಒಂದು ರೆಜೂಲ್ಯೂಷನ್ ಏನು ಮಾಡಿದ್ದೇವೆಂದರೆ, ವಿಶೇಷ ನೇಮಕಾತಿಯನ್ನು ಮಾಡುತ್ತೇವೆ, ಆ ರೋಸ್ಟರ್ ಸಿಸ್ಟಂ ಪ್ರಕಾರವಾಗಿ ತುಂಬ ತಕ್ಕಂತಹ ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದ್ದೇವೆ. ಆದರೆ ಇಲ್ಲಿಯವರೆಗೆ ಆ

ವಿಶೇಷವಾದಂತಹ ನೇಮಕಾತಿಯ ಬಗ್ಗೆ ಒಂದು ಚಾಕಾರ ಶಬ್ಧವು ಸಹ ಬಂದಿಲ್ಲ. ಇವತ್ತು ಸಹ ಇದನ್ನು ಮಾಡುತ್ತಿಲ್ಲ. ನೀವು ವರ್ಷ ವರ್ಷ ಕಾರಣಗಳನ್ನು ಹೇಳಿ ಖಾಯಂ ಮಾಡುಕೊಳ್ಳುತ್ತೀರಿ. ನಾವು ರೋಸ್ಟರ್ ನ್ನು ಕೇಳಿದಾಗ ಕೆ.ಎ.ಟಿ. ಆರ್ಡರ್‌ನ್ನು ಒಬ್ಬರು ತೋರಿಸುತ್ತಾರೆ, ಸುಪ್ರೀಂ ಕೋರ್ಟ್ ಆರ್ಡರ್‌ನ್ನು ಒಬ್ಬರು ತೋರಿಸುತ್ತಾರೆ. ಈ ರೀತಿಯಾಗಿ ಮಾಡಿ ಈ ಒಂದು ಜನಾಂಗ ಬೇರೆ ಜನಾಂಗದ ಸರ್ವನಾಶವನ್ನು ಮಾಡತಕ್ಕ ಕೆಲಸ ಮಾಡುವುದಕ್ಕೆ ತಾವು ಹೋಗಬೇಡಿ. ನೀವು ತಕ್ಷಣ ವಿಶೇಷ ವಾದಂತಹ ನೇಮಕಾತಿಗೆ ಕಾಳಜಿಯನ್ನು ವಹಿಸಿ. ಎಲ್ಲೆಲ್ಲಿ ಕೊರತೆ ಇದೆ ಅದು ಐ.ಟಿ.ಐ. ಇರಬಹುದು, ಪಾಲಿಟೆಕ್ನಿಕ್ ಇರಬಹುದು, ಏಡೆಡ್ ಸಂಸ್ಥೆಗಳಿರಬಹುದು ಅಥವಾ ಯಾವ ಇಲಾಖೆಗಳಲ್ಲಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರವಾಗಿ ಅಭ್ಯರ್ಥಿಗಳನ್ನು ಖಾಯಂ ಮಾಡಿದ್ದೀರಿ, ಆ ಇಲಾಖೆಯಲ್ಲಿಯೂ ಕೂಡ ಭರ್ತಿ ಮಾಡತಕ್ಕಂತಹ ಕೆಲಸವನ್ನು ಮಾಡಬೇಕು. ಇಲ್ಲದಿದ್ದರೆ ನಾವುಗಳೆಲ್ಲರೂ ಇದ್ದು ನಿಜವಾಗಿಯೂ ಆ ಸಮಾಜಕ್ಕೆ ಅನ್ಯಾಯವನ್ನು ಮಾಡಿದ ಹಾಗೆ ಆಗುತ್ತದೆಂದು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಹೇಳಿದಂತೆ ಈ ರಾಜ್ಯದಲ್ಲಿ ಖಾಸಗಿಯಾಗಿ ನಡೆಸುತ್ತಿರುವ 200 ಐ.ಟಿ.ಐ.ಸಂಸ್ಥೆಗಳಿವೆ. ಇವು ಪಟ್ಟಣಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಿವೆ. ಹಿಂದೆ ಕಾಂಗ್ರೆಸ್ ಪಕ್ಷವು ಆಡಳಿತದಲ್ಲಿದ್ದಾಗ 50 ಹಳ್ಳಿಗಾಡಿನಲ್ಲಿರತಕ್ಕಂತಹ ಐ.ಟಿ.ಐ. ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸಬೇಕೆಂದು ಹೇಳಿ ಅವರು ಸಂಪುಟದಲ್ಲಿ ಒಂದು ತೀರ್ಮಾನ ವನ್ನು ಮಾಡಿದ್ದರು. ಅದು ಆಜ್ಞೆಯಾಗಿ ಹೊರಡಲಿಲ್ಲ. ಈ ನಡುವೆ ಪಟ್ಟಣದ ಐ.ಟಿ.ಐ.ಗಳನ್ನು ಸೇರಿಸಬೇಕೆಂದು ವಿದ್ಯಾರ್ಥಿಗಳು ಮತ್ತು ಅಲ್ಲಿ ಕೆಲಸ ಮಾಡತಕ್ಕ ನೌಕರ ವರ್ಗ ಎಲ್ಲಾ ಚಳುವಳಿ ಪ್ರಾರಂಭಮಾಡಿರು. ಅನೇಕ ಬಾರಿ ವಿಧಾನ ಸಭೆಯಲ್ಲಿ ಮತ್ತು ವಿಧಾನ ಪರಷತ್ತಿನಲ್ಲಿ ಆ ವಿಚಾರ ಪ್ರಸ್ತಾಪವಾಗಿದೆ ಆಯಾಯ ಕಾಲದಲ್ಲಿದ್ದಂತೆ ಕಾರ್ಮಿಕ ಮಂತ್ರಿಗಳು ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ, ಸರ್ಕಾರದ ಸಹಾನುಭೂತಿ ಇದೆ, ನೋಡುತ್ತೇವೆಂದು ಉತ್ತರಗಳನ್ನು ಕೊಟ್ಟಿದ್ದಾರೆ, ಕೆಲವು ಆಶ್ವಾಸನೆಗಳನ್ನು ಕೂಡ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಸ್ಪಷ್ಟಪಡಿಸತಕ್ಕದ್ದು ಏನೆಂದರೆ, ಅವರನ್ನು ಅನು ದಾನಕ್ಕೆ ಒಳಪಡಿಸಬೇಕೆಂಬುದರ ಬಗ್ಗೆ ಈ ಸರ್ಕಾರಕ್ಕೆ ಸಹಾನುಭೂತಿ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಮಾನ್ಯ ಖರ್ಗೆ ಯವರು ಹೇಳಿರತಕ್ಕ ರೀತಿಯಲ್ಲಿ ಅನೇಕ ಕಡೆಗಳಲ್ಲಿ ಈ ರೀತಿ ಅವರು ಹೇಳಿರುವ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೀಗೆ ಮಾಡುವಾಗ ರೋಸ್ಟರ್ ಸಿಸ್ಟಂ ಅನುಸರಿಸುವುದಿಲ್ಲ, ಮೀಸಲಾತಿ ಕೊಡದೆ ಅನೇಕ ಖಾಸಗಿ ಸಂಸ್ಥೆಗಳು ಅವರವರಿಗೆ ಬೇಕಾದ ರೀತಿಯಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡತಕ್ಕದ್ದು, ಇನ್‌ಸ್ಟ್ರಕ್ಟರ್‌ಗಳನ್ನು ನೇಮಕ ಮಾಡತಕ್ಕದ್ದು, ವಿದ್ಯಾರ್ಥಿಗಳಿಗೆ ತರಬೇತಿ ಕೊಡುವುದಕ್ಕೆ ತೆಗೆದುಕೊಂಡಿರತಕ್ಕ ದ್ದರಲ್ಲಿ ಇದು ಆಗಿರತಕ್ಕದ್ದು ಸಹಜ. ಇದನ್ನು ಕೂಡ ತೀವ್ರವಾಗಿ ಪರಿಶೀಲನೆ ಮಾಡ ಬೇಕಾಗುತ್ತದೆ. ಅನುದಾನಕ್ಕೆ ಒಳಪಡಿಸತಕ್ಕ ಸಂದರ್ಭದಲ್ಲಿ ಮೀಸಲಾತಿ ಅನುಸರಿಸಿದ್ದಾರೋ ಅಥವಾ ಇಲ್ಲವೋ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಿಗಬೇಕಾದ ಪಾಲು

ಕೊಟ್ಟಿದ್ದಾರೋ ಇಲ್ಲವೋ, ಹಿಂದುಳಿದವರಿಗೆ ಕೊಟ್ಟಿದ್ದಾರೋ ಇಲ್ಲವೋ ಎನ್ನುವುದನ್ನು ಕೂಡ ಗಮನದಲ್ಲಿಟ್ಟುಕೊಂಡು, ಎಲ್ಲ ಒಟ್ಟಾರೆ ಸೇರಿಸಿ ಇವತ್ತಿಗೆ ವರ್ಷ ತುಂಬಿರತಕ್ಕ 200 ಖಾಸಗಿ ಸಂಸ್ಥೆಗಳಲ್ಲಿ 125ನ್ನು ಸೇರಿಸಬೇಕಾಗುತ್ತದೆ. ಒಟ್ಟಿಗೆ 200ನ್ನು ಸೇರಿಸ ಬೇಕಾಗುತ್ತದೆ. ಆ ಕಾರಣದಿಂದ ಇದರಲ್ಲಿ ನಾವು ಕೊಟ್ಟರತಕ್ಕ ಮಾತಾಗಲಿ, ಹಿಂದಿನ ಮಂತ್ರಿಗಳು ಕೊಟ್ಟಿರತಕ್ಕ ಮಾತಾಗಲಿ, ಆಶ್ವಾಸನೆಯಾಗಲಿ ಅದರಲ್ಲಿ ಹಿಂದಕ್ಕೆ ಹೋಗತಕ್ಕ ಪ್ರಶ್ನೆ ಇಲ್ಲ. ಇದನ್ನೆಲ್ಲ ಕೂಲಂಕುಷವಾಗಿ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ಎಲ್ಲ ಖಾಸಗಿ ಸಂಸ್ಥೆಗಳು, ಪಟ್ಟಣದಲ್ಲಿರತಕ್ಕವು ಮತ್ತು ಹಳ್ಳಿಗಾಡಿನಲ್ಲಿರತಕ್ಕವು ಹಾಗೂ ಶ್ರೀ ಖರ್ಗೆಯವರು ಹೇಳಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಅನುದಾನಕ್ಕೆ ಒಳಪಡಿಸುವುದಕ್ಕೆ ನಿರ್ಣಯವನ್ನು ಮಾಡುತ್ತೇವೆಂಬ ಮಾತನ್ನು ಬಹಳ ಸ್ಪಷ್ಟವಾಗಿ ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

ಉಪಾಧ್ಯಕ್ಷರು :- ಶ್ರೀ ವಾಟಾಳ್‌ರಿಗೆ ಉತ್ತರ ಹೇಳಿದ್ದಾರೆ, ಇವತ್ತು ಶೂನ್ಯ ವೇಳೆಯಲ್ಲಿ ಆಗುವುದಿಲ್ಲ. ತಾವು ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿ, ಅವರು ಉತ್ತರ ಕೊಡುತ್ತೇವೆಂದು ಹೇಳಿದರೆ ಪ್ರಸ್ತಾಪ ಮಾಡಿ.

ಶ್ರೀ ಜೆ. ಎ. ಶ್ರೀ ರಾಮರೆಡ್ಡಿ :- ನಾವು ಆಗಸ್ಟ್ ಒಳಗೆ ಆದನ್ನು ಖಾಯಂ ಮಾಡಬೇಕೆಂದು ಕೇಳಿದ್ದೇವೆ. ಸುಪ್ರೀಂ ಕೋರ್ಟ್ ಆದೇಶ ಬೇರೆ ಇದೆ. ಸರ್ಕಾರ ಆಗಸ್ಟ್ ಒಳಗೆ ಮಾಡುತ್ತೇವೆಂದು ಹೇಳದಿದ್ದರೆ ನಾನು ಸಹ ಶ್ರೀ ಪುಟ್ಟಣ್ಣಯ್ಯನವರ ಜೊತೆಗೆ ಧರಣಿ ಕೂರುತ್ತೇನೆ.

(ಶ್ರೀ ಶ್ರೀರಾಮರೆಡ್ಡಿಯವರು ಧರಣಿಗೆ ಬಂದರು)

ಶ್ರೀ ಸಿ. ಮಂಜುನಾಥ ಕುನ್ನೂರು :- ಆಗಸ್ಟ್‌ನಿಂದ ಅಕಾಡೆಮಿಕ್ ಇಯರ್ ಪ್ರಾರಂಭವಾಗುವುದರಿಂದ ಅವರು ಬಹಳ ದಿನಗಳಿಂದ ಕೇಳುತ್ತಿರುವುದರಿಂದ ಕೊನೇಪಕ್ಷ ಆಗಸ್ಟ್‌ಗೆ ಗ್ರಾಂಟ್ ಕೊಡದಿದ್ದರೂ ಆರ್ಡರ್ ಆದರೂ ಮಾಡಿ ಹಿಂದಿನಿಂದ ಪೇಮೆಂಟ್ ಮಾಡತಕ್ಕ ವ್ಯವಸ್ಥೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸ್ನೇಹಿತರು ಧರಣಿ ಮಾಡುತ್ತಿದ್ದಾರೆ. ಮಾನ್ಯ ಉಪಮುಖ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ ತಾವು ಹೇಗೂ ಮಾಡೇ ಮಾಡುತ್ತೇವೆಂದು ಭರವಸೆ ಕೊಟ್ಟರುವಾಗ ಒಂದು ಕಾಲಮಿತಿ ಹಾಕಿ ಮತ್ತು ಎಲ್ಲ ವಿರೋಧ ಪಕ್ಷದ ಮುಖಂಡರನ್ನು ಕರೆದು ಮಾತುಕತೆ ಮಾಡಿ.

ಶ್ರೀ ಸಿದ್ದರಾಮಯ್ಯ :- ನಾನು ಇದಕ್ಕಿಂತ ಸ್ಪಷ್ಟವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ನಾವು ಅವರ ಪರವಾಗಿದ್ದೇವೆ, ಕೊಡಬೇಕೆಂಬುದರ ಬಗ್ಗೆ ನಮಗೆ ಕಾಳಜಿ ಇದೆ. ಇದೆಲ್ಲ ಪರಿಶೀಲನೆ ಮಾಡಿ ಕೊಡುತ್ತೇವೆಂದರೆ, ಈಗಲೇ ಹೇಳಬೇಕು, ಆಗಸ್ಟ್‌ಗೆ ಹೇಳಿ, ನವೆಂಬರ್‌ಗೆ ಹೇಳಿ ಅಂದರೆ ಇಂಥ ತಿಂಗಳೇ ಎಂದು ಹೇಳುವುದಕ್ಕಾಗುವುದಿಲ್ಲ. ಇವೆಲ್ಲ ಪೂರೈಸಿದ ತಕ್ಷಣವೇ ಸರ್ಕಾರ ಇದಕ್ಕೆ ಒಪ್ಪಿಗೆ ಕೊಡುತ್ತದೆ.

ಉಪಾಧ್ಯಕ್ಷರು :- ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ, ಸಾಕು.

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರಗಳೆಲ್ಲ ಮೊದಲಿನಿಂದಲೂ ಇದೇ ರೀತಿ ಭರವಸೆ ಕೊಡುತ್ತಾ ಬಂದಿವೆ. ಪ್ರತಿ ಸರ್ಕಾರಗಳು ಬಂದು ಭರವಸೆ ಕೊಟ್ಟಿವೆ. ತಮ್ಮ ಕಾಲದಲ್ಲಿ ಆಗುತ್ತದೆಂಬ ನಂಬಿಕೆ ಮೇಲೆ ಈ ಪ್ರಶ್ನೆಯನ್ನು ಎತ್ತಿದ್ದೇವೆ. ಆದುದರಿಂದ ಒಂದು ತಿಂಗಳಿನಲ್ಲಿ...

ಶ್ರೀ ಸಿದ್ಧರಾಮಯ್ಯ :- ಈ ಪ್ರಸ್ತಾಪ ಪ್ಲಾನಿಂಗ್ ಡಿಪಾರ್ಟ್‌ಮೆಂಟ್, ಫೈನಾನ್ಸ್ ಡಿಪಾರ್ಟ್‌ಮೆಂಟ್ ಪರಿಶೀಲನೆಯಾಗಿ ಅವರು ಹೇಳಿದಂತೆ ರೋಸ್ಟರ್ ಎಲ್ಲಾ ಮಾಡಿದ ಮೇಲೆ ಕ್ಯಾಬಿನೆಟ್‌ಗೆ ಬರಬೇಕಾಗುತ್ತದೆ, ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಆದುದರಿಂದ ಇದೇ ಆಗ್ಸ್ಟ್, ಸೆಪ್ಟೆಂಬರ್, ನವೆಂಬರ್ ಎಂದು ಹೇಳುವುದಕ್ಕಿಂತ ಆದಷ್ಟು ತೀವ್ರವಾಗಿ ಮಾಡಿ ಆದಷ್ಟು ಜಾಗ್ರತೆ ತೆಗೆದು ಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತಾರೆಂದು ಶ್ರೀ ಸಿದ್ಧರಾಮಯ್ಯನವರ ಮೇಲೆ ನಂಬಿಕೆ ಇಟ್ಟುಕೊಂಡು ನಮ್ಮ ಸ್ನೇಹಿತರು ವಾಪಸ್ಸು ಸ್ಥಳಕ್ಕೆ ಬರಲಿ ಎಂದು ಕೇಳಿಕೊಳ್ಳುತ್ತೇನೆ.

(ಶ್ರೀ ಪುಟ್ಟಣ್ಣಯ್ಯನವರು ಮತ್ತು ಶ್ರೀ ಶ್ರೀರಾಮರೆಡ್ಡಿಯವರು ಧರಣಿಯನ್ನು ಹಿಂತೆಗೆದುಕೊಂಡರು).

(2) **ಕಾಡುಗಳ್ಳ ವೀರಪ್ಪನ್ ಬಗ್ಗೆ.**

+**ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :-** ಮಾನ್ಯ ಉಪಾಧ್ಯಕ್ಷರೇ, ಕಾಡುಗಳ್ಳ ವೀರಪ್ಪನ್ ಬಗ್ಗೆ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಇದು ಬಹಳ ಪ್ರಮುಖವಾದ ವಿಚಾರ. ತಮಿಳ್ನಾಡು ಸರ್ಕಾರ ವೀರಪ್ಪನ್‌ಗೆ ಕ್ಷಮಾಪಣೆ ಕೊಡಬೇಕೆಂಬ ದೃಷ್ಟಿಯಲ್ಲಿ ಅವರ ಧೋರಣೆ ಹೊರಟಿದೆ, ಮತ್ತು ಕರ್ನಾಟಕ ಸರ್ಕಾರ ಅವನನ್ನು ಹಿಡಿಯಬೇಕೆಂದು ಏನು ಒಬ್ಬ ಪೋಲೀಸ್ ಅಧಿಕಾರಿ ಶ್ರೀ ಶಂಕರ ಬಿದ್ರಿ ಅವರನ್ನು ನೇಮಕ ಮಾಡಿದ್ದರು ಆ ವ್ಯಕ್ತಿಯನ್ನು ಈಗ ಬದಲಾವಣೆ ಮಾಡಿ ಅವರು ಈಗ ಬೇರೆ ಇಲಾಖೆಗೆ ಬಂದಿದ್ದಾರೆ. ಆದುದರಿಂದ ಅವನನ್ನು ಹಿಡಿಯತಕ್ಕ ವ್ಯವಸ್ಥೆಯನ್ನು ಏನು ಸರ್ಕಾರ ಮಾಡಿತ್ತು ಆ ವ್ಯವಸ್ಥೆ ಇವತ್ತು ಕುಸಿದು ಬಿದ್ದಿದೆ, ಅದಕ್ಕೆ ಅಷ್ಟು ಶಕ್ತಿ ಕಡಿಮೆಯಾಗಿದೆಯೆಂದು ನಾನು ಅಂದುಕೊಂಡಿದ್ದೇನೆ. ಆ ಭಾಗಗಳಲ್ಲಿ ಅಂದರೆ ಆದು ಚಾಮರಾಜನಗರ ಆಗಬಹುದು, ಕೊಳ್ಳೇಗಾಲ ಆಗಬಹುದು, ಯಳಂದೂರು ಆಗಬಹುದು, ಆ ಭಾಗದಲ್ಲಿ ನಡೆದಿರತಕ್ಕ ಘಟನೆ ಮಹದೇಶ್ವರ ಬೆಟ್ಟದಲ್ಲಿ ನಡೆದಿರತಕ್ಕ ಒಂದು ಭಯಾನಕ ಪರಿಸ್ಥಿತಿ ಎಲ್ಲರಿಗೆ ಗೊತ್ತಿದೆ. ಆತ ಸರ್ಕಾರದ ಅನೇಕ ಉನ್ನತಾಧಿಕಾರಿಗಳನ್ನು ಆತ ಬಲಿ ತೆಗೆದುಕೊಂಡಿದ್ದಾನೆ. ಬಹಳ ಅಪ್ರಮಾಣಿಕವಾಗಿ ನಡೆದಿದ್ದಾನೆ, ನೂರಾರು ಕೋಟಿ ರೂಪಾಯಿ ನಷ್ಟವಾಗಿದೆ. ಭಯಭೀತಿ ಉಂಟಾಗತಕ್ಕ ಘಟನೆ ಅಲ್ಲಿ ನಡೆದಿದೆ;